Doc-33
T-N2

R No KRNN 12

3-3-75

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity –

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ಥಾಪನಾಚಾರ್ಯ ಎಂ. ಎಸ್. ಕೃಷ್ಣರಾವ್ (3 ಪುಟ)

ಕಾಶ್ಮೀರ ಒಡಂಬಡಿಕೆಗೆ ಮೊರಾರ್ಜಿ ಸ್ವಾಗತ

ತಾಲ್ಲೂ ಬೋರ್ಡ್ ಆಡಳಿತ ಅಧಿಕಾರಿಗಳ ವಶಕ್ಕೆ

ಕರ್ನಾಟಕದಲ್ಲಿ ಸರ್ವ ತಾಲ್ಲೂ ಮಂಡಲಿಗಳೂ ಆಡಳಿತಗಾರರ ವಶಕ್ಕೆ ಬಂದಿರುವದು. ರಾಜ್ಯದಲ್ಲಿ ನೂರ ಎಪ್ಪತ್ತೈದು ತಾಲ್ಲೂ ಮಂಡಲಿಗಳು ಇವೆ.

★

ಉಳಿತಾಯ ಅಂದಾಜುಪಟ್ಟಿ

ಪಶ್ಚಿಮ ಬಂಗಾಳದ ಮುಂದಿನ ಸಾಲಿನ ಅಂದಾಜುಪಟ್ಟಿಗೆ ಇಪ್ಪತ್ತೇಳು ಲಕ್ಷ ರೂ. ಉಳಿತಾಯ ದೊರೆತಿದೆ.

★

ಈಗ ಆಗುತ್ತಿರುವ ವಾಹನ ಅಪಘಾತಗಳಲ್ಲಿ ಶೇಕಡ ಇಪ್ಪತ್ತೊಂದರಷ್ಟು ವಾಹನ ಅಪಘಾತಗಳು 2 ಚಕ್ರಗಳ ವಾಹನಗಳಿಂದ ಆಗುತ್ತಿದೆ ಎಂದು ಸಾರಿಗೆ ಮಂತ್ರಿ ಶ್ರೀ ಮಹಮದಾಲಿ ಬೆಂಗಳೂರಿನಲ್ಲಿ ತಿಳಿಸಿದರು.

ಐವರ ಮರಣ

ಹಜಾರಿಬಾಗಿನಿಂದ ಬಂದಿರುವ ವರದಿ ಪ್ರಕಾರ ಈ ಜಿಲ್ಲೆಯಲ್ಲಿರುವ ಜಾಸಗಿ ಕಲ್ಲಿಜ್ಜಲು ಗಣಿಯೊಂದರ ಭಾಗ ಕುಸಿದು 5 ಮಂದಿ ಸತ್ತರು.

★

ಗೌರವ ನೀಡಿಕೆ

ಹದಿನೈದು ಗ್ರಂಥಗಳನ್ನು ರಚಿಸಿರುವ ಮದ್ರಾಸು ವಿಶ್ವವಿದ್ಯಾನಿಲಯದ ಮಾಜಿ ಉಪ ಸ್ಥಾನಪತಿ ಶ್ರೀ ಮೀನಾಕ್ಷಿ ಸುಂದರಂರವರು ಸಾಹಿತ್ಯ ಅಕಾಡೆಮಿಯ ಫೆಲೊ ಆಗಿ ಚುನಾಯಿತರಾಗಿರುವರು.

★

ದೇಸಾಯರ ಸ್ವಾಗತ

ನವ ದೆಹಲಿಯಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಸಂಸ್ಥಾ ಕಾಂಗ್ರೆಸ್ ನಾಯಕ ಶ್ರೀ ಮೊರಾರ್ಜಿ ದೇಸಾಯಿಯವರು ವಿಶಾತನಾಡುತ್ತಾ, ಕೇಂದ್ರ ಸರ್ಕಾರ ಷೇಕ್ ಅಬ್ದುಲ್ಲರ ಸಂಗಡ ಮಾಡಿಕೊಂಡಿರುವ ಒಡಂಬಡಿಕೆಯನ್ನು ಸುಸ್ವಾಗತಿಸಿದರು ಅವರು ತಮ್ಮ ಮಾತನ್ನು ಮುಂದುವರಿಸುತ್ತ ಒಡಂಬಡಿಕೆಯನ್ನು ಸಂಪೂರ್ಣವಾಗಿ ಟೀಕಿಸಿ ಮಾತಾಡುವವರ ವಿಚಾರದಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ಸರ್ಕಾರ ನಡೆಸುವ ಕ್ರಮಗಳೆಲ್ಲ ತಪ್ಪಾದುದಲ್ಲ ಎಂದು ತಿಳಿಸಿದರು

★

ಕ್ಷಾಮ ಪ್ರದೇಶಗಳು

ಗುಲ್ಬರ್ಗ, ರಾಯಚೂರು, ಬೆಳಗಾವಿ, ಕೋಲಾರ, ಚಿತ್ರದುರ್ಗ, ಮತ್ತು ಬಿಜಾಪುರ ಜಿಲ್ಲೆಗಳಲ್ಲಿರುವ ನಲವತ್ತಾರು ತಾಲ್ಲೂಕುಗಳನ್ನು ಕ್ಷಾಮ ಪೀಡಿತ ಪ್ರದೇಶಗಳೆಂದು ಸೂಚಿಸಲಾಗಿದೆ. ಕಳೆದ ವರ್ಷ ಸರ್ಕಾರ ಈ ಪ್ರದೇಶಗಳಲ್ಲಿ ಖರ್ಚು ಮಾಡಿದ ಹಣ ಮೂರು ಕೋಟಿ ರೂ ಗಳು

★

ನೇತನದ ಪಾವತಿಗಾಗಿ

ಕರ್ನಾಟಕ ಸರ್ಕಾರ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳ ಶಿಕ್ಷಕರ ವೇತನಗಳ ಬಾಕಿ ತೀರಿಸಲು ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದೆ.

★

ಭೂರಿ ನೆರವಣಿಗೆಯ ಉದ್ದೇಶ

ಈ ತಿಂಗಳು 6 ನೇ ತಾರೀಖು ಜನತಾ ಸಂಘರ್ಷ ಸಮಿತಿ ಮತ್ತು ವಿದ್ಯಾರ್ಥಿ ತರುಣ ಸಂಘರ್ಷ ಸಮಿತಿ ಭೂತಿ ನೆರವಣಿಗೆ ಮತ್ತು ಸರ್ಕಾರಕ್ಕೆ ಜನತಾ ಪ್ರಣಾಳಿಕೆ ಸಲ್ಲಿಸುವ ಉದ್ದೇಶ ಹೊಂದಿದೆ.

★

ಸಾರಾಯಿ ಪತ್ತೆ

ಬೆಂಗಳೂರಿನ ಅಬ್ಕಾರಿ ಇಲಾಖೆಯ ಹಾರುವ ತಂಡದವರು ಅತೋಳಪುರದಲ್ಲಿ ಇನ್ನೂರು ಲೀಟರು ಅಕ್ರಮ ಸಾರಾಯಿ ವಶಪಡಿಸಿಕೊಂಡು, ಒಂದೂವರೆ ಸಾವಿರ ಲೀಟರು ಕೊಳೆ ನಾಶ ಮಾಡಿ ಈರ್ವರನ್ನು ಬಂಧಿಸಿದರು.

★

ವಿಚಿತ್ರ ಆದರೂ ಸತ್ಯ

ರಾಷ್ಟ್ರೀಯ ಪೋಲೀಸರ ಇಬ್ಬರು ವಿಶಿನಿಧಿಗಳು ಪಾರ್ಸೀಲ್ ನಗರದ ಬಂದರಿನಲ್ಲಿ ಕೆಲಸ ಮಾಡುತ್ತಿದ್ದ ಮೂವರು ಪೋಲೀಸರ ಕಳ್ಳತನ ತನಿಖೆ ಮಾಡಲು ಬಂದಿರುವರೆಂದು ಪ್ಯಾರಿಸ್‌ನ ಲಾಮಾಂದೆ ಪತ್ರಿಕೆ ವರದಿ ಮಾಡಿದೆ ಈ ಮೂರು ಪೋಲೀಸರು ಕಳ್ಳರಿಂದ ವಶಪಡಿಸಿಕೊಂಡಿದ್ದ ಸಕ್ಕರೆಗಳನ್ನು ದುರುಪಯೋಗ ಪಡಿಸಿಕೊಂಡಿರುವರೆಂದು ತಿಳಿದುಬಂದಿದೆ.

●

ದಿವ್ಯವಾಣಿ

ಗುಲಾಮಗಿರಿಯ ಸುಖಕ್ಕಿಂತ ಸ್ವಾತಂತ್ರ್ಯದ ಕಷ್ಟವೇ ಲೇಸು.

— ಮಿಲ್ಟನ್

ವುಡ್‌ಲಾಂಡ್ 28 2 75 ರಿಂದ

ಅವೋಫ ಆರಂಭ

ದಾರಿ ತಪ್ಪಿದ ಮಗ

ಅಪೂರ್ವ ಕನ್ನಡ ಕಲಾಕೃತಿ ಪಾತ್ರ– ರಾಜಕುಮಾರ್ (ದ್ವಿಪಾತ್ರದಲ್ಲಿ)

ವಜ್ರಮುನಿ, ಅಶ್ವತ್ಥ್, ಬಾಲಕೃಷ್ಣ, ಕಲ್ಪನ, ಆರತಿ ದಿನ ೫ ಪ್ರದರ್ಶನಗಳು

ಅಪೆರಾ 28 2 75 ರಿಂದ

ದಾವತ್

ಅವೋಫ ಹಿಂದಿ ಕಲರ್ ಚಿತ್ರ

ಪಾತ್ರ – ಧರ್ಮೇಂದ್ರ ಕೌಲ್ ಜಯಶ್ರೀ ದಿನ 3 ಪ್ರದರ್ಶನಗಳು

ಪತಿಯ ಮಾನಸುತ್ಯಾದಿ ಕಾಪಾಡಿದ ಮಹಿಳೆ

★

ಇನ್ನೂರು 80 ವರ್ಷಗಳ ಹಿಂದಿನ ವಿಷಯವಿದು. ಮಧ್ಯ ಕಲ್ಕತ್ತಾದಲ್ಲಿ ಶ್ರೀಮಂತ ಕುಲೀನ ಶ್ರೀ ಮಿತ್ತರ್‌ರವರ ಗೃಹದಲ್ಲಿ ವಿವಾಹವೊಂದು ವೈಭವವಾಗಿ ನಡೆಯುತ್ತಿತ್ತು ; ದೊಡ್ಡ ಸಭಾಂಗಣದಲ್ಲಿ ಅತಿಥಿಗಳು ತುಂಬಿದ್ದರು ; ಬಾಗಿಲು ಮುಂದೆ ವಾಹನಗಳು ನಿಲ್ಲುವ ಸ್ಥಳ ಮತ್ತು ಅಂಗಳದಲ್ಲಿ ಗುಂಪುಗಳ ಓಡಾಟ, ಸುತ್ತು ಮಾತುಕತೆಗಳು ನಡೆಯುತ್ತಿತ್ತು ; ಮಧುರ ಸಂಗೀತ ಹರ್ಷೋದ್ಗಾರಗಳಿಂದ ತೂಡಿತ್ತು.

ಮನೆಯ ಯಜಮಾನನು ಸಭಾಂಗಣದ ಮಧ್ಯೆ ಕುಳಿತಿದ್ದನು ; ಸುತ್ತಮುತ್ತ ಗಣ್ಯ ಅತಿಥಿಗಳು ಕುಳಿತಿದ್ದರು ; ಅಂದ ಅಂದದ ಕಂದೀಲುಗಳು ಉರಿಯುತ್ತಿತ್ತು. ಆಗ ಎಲೆಕ್ಟ್ರಿಕ್ ದೀಪವಿರಲಿಲ್ಲ. ಆಗಿನ ಕಾಲದ ಕುಲೀನ ಪದ್ಧತಿಯು, ಕಾಯಸ್ಥ ರೊಬ್ಬರ ಪ್ರಥಮ ಪುತ್ರಿಯು ಘೋಷ್ ಅಥವಾ ಬೋಸ್ ಕುಲೀನ ಕಾಯಸ್ಥರಿಗೇ ವಿವಾಹ ಮಾಡಬೇಕೆಂದಿದ್ದಿತು ; ಅದರಂತೆ ಮನೆಯ ಪ್ರಥಮ ಪುತ್ರಿಯನ್ನು ಚಿಕ್ಕ ವಯಸ್ಸಿನಲ್ಲೇ ವಿದ್ಯೆ ಇಲ್ಲದ, ಐಶ್ವರ್ಯವಿಲ್ಲದ, ರೂಪಿಲ್ಲದ ಓರ್ವ ಘೋಷ್‌ರಿಗೆ ಮದುವೆ ಮಾಡಲಾಗಿತ್ತು ; ಈ ಗಣ್ಯ ಮಿತ್ತರ್ ಸಂಸಾರಕ್ಕೆ ಅವನು ಪ್ರಥಮ ಅಳಿಯನಾಗಿದ್ದನು ಮತ್ತು ಮಾವನ ಮನೆಯಲ್ಲೇ ಪರೋಪಜೀವಿಯಾಗಿ ಸೇರಿಕೊಂಡನು. ಮಿತ್ತರ್‌ರವರ ಇಬ್ಬರು ಕಿರಿಯ ಪುತ್ರಿಯರಲ್ಲಿ ಒಬ್ಬಳು ಸೋವಾಬಜಾರ್ ರಾಜ ಮನೆತನಕ್ಕೂ, ಮತ್ತೊಬ್ಬಳು ಆಗಿನ ಕಾಲದ ಉತ್ತಮ ಪದವಿಯೆ ಡೆಪ್ಟೀ ಮ್ಯಾಜಿಸ್ಟ್ರೇಟ್‌ಗೂ ಮದುವೆಯಾಗಿದ್ದರು

★

SHAKTI SUDHA

A Superb Tonic

Quality Printing Neat Binding

Lakshminarasimha Press

Sivarampet Mysore 1

Contribute Liberally

to the National Defence Fund

Protect the Cow

Silver Jubilee of Gorakshana

When Journals devoted to the pious and noble cause of cow-protection, kindness to animals, ahimsa, etc., are very few and dharmic papres are short-lived, it is rejoicing that the 'Gorakshana' will be celebrating its uniqe Silver jubilee early and in a befitting manner. Donations and Messages from philanthropic, Gomata-interested humanitarian persons are fervently solicited, and this act of kindness will be gratefully acknowledged and ever remembered.

Editor 'Gorakshana" Chamarajapuam, Mysore 4

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Help The Gorakshana

—Humanitarian Propoganda Monthly....

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore